ದಿನಾಂಕ 15-07-2026 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು 6ನೇ ಪ್ರತಿವಾದಿಯ ವಾರಸುದಾರರ ಪರ ಶ್ರೀ ವಿ.ಎಸ್.ಎಸ್., ವಕೀಲರಿಂದ:-

ನನ್ನ ಪತಿ ಆಸ್ತಿಯನ್ನು ಚೌಡಯ್ಯರವರಿಂದ ಖರೀದಿ ಮಾಡಿದರು. ಅವರನ್ನು ನಾನು ನೋಡಿದ್ದೇನೆ. ಚೌಡಯ್ಯರವರ ಫೋಟೋ ನಿಡಿ-1ರಲ್ಲಿ ಇದೆ, ಅವರೇ ಸದರಿ ಚೌಡಯ್ಯ. ಸಾಕ್ಷಿಗೆ ಒಂದು ಫೋಟೋ ತೋರಿಸಿ ಸದರಿ ಫೋಟೋದಲ್ಲಿರುವ ವ್ಯಕ್ತಿಯೇ ಚೌಡಯ್ಯರವರಾ ಎಂದರೆ ಸಾಕ್ಷಿಯು ನಿಡಿ-1ರಲ್ಲಿರುವ ಫೋಟೋ ಗೊತ್ತು, ಈಗ ತೋರಿಸುತ್ತಿರುವ ಫೋಟೋ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ಒಂದು ಪಡಿತರ ಚೀಟಿಯನ್ನು ತೋರಿಸಿ ನಿಡಿ-1ರಲ್ಲಿರುವ ಚೌಡಯ್ಯ ಹಾಗೂ ಈಗ ತೋರಿಸಿದ ಪಡಿತರ ಚೀಟಿಯಲ್ಲಿರುವ ಚೌಡಯ್ಯ ಒಂದೇನಾ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ಸದರಿ ಪಡಿತರ ಚೀಟಿಯನ್ನು ನಿಡಿ-8 ಎಂದು ಗುರುತಿಸಲಾಯಿತು.

ಸಾಕ್ಷಿಗೆ ನ್ಯಾಯಾಲಯದ ಮುಂದಿರುವ ಭಾಗ್ಯಮ್ಮ ಎಂಬ ವ್ಯಕ್ತಿಯನ್ನು ತೋರಿಸಿ ಇವರು ಗೊತ್ತಾ ಎಂದರೆ ಸಾಕ್ಷಿಯು ಗೊತ್ತು ಎಂದು ನುಡಿಯುತ್ತಾರೆ. ಸದರಿ ಭಾಗ್ಯಮ್ಮನಿಗೆ ಪದ್ಮಮ್ಮ ಎಂಬ ಮಗಳಿದ್ದರು ಎಂದರೆ ಗೊತ್ತಿಲ್ಲ. ನ್ಯಾಯಾಲಯದ ಮುಂದಿರುವ ಭಾಗ್ಯಮ್ಮ ನನ್ನ ಪತಿಗೆ ಆಸ್ತಿ ಮಾರಿದ ಚೌಡಯ್ಯರವರ ಪತ್ನಿ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಭಾಗ್ಯಮ್ಮರವರ ಗಂಡ ಚೌಡಯ್ಯ ಎಂದು ಗೊತ್ತಿದ್ದು ಸಹ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಪತಿ ಖರೀದಿ ಮಾಡಿರುವ ಸ್ವತ್ತಿನಲ್ಲಿ ಭಾಗ್ಯಮ್ಮ ಮತ್ತು ಅವರ ಮಗಳಿಗೆ ಹಕ್ಕಿದ್ದು ಆಸ್ತಿ ಹೊರಟು ಹೋಗುತ್ತದೆ ಎಂದು ಅವರು ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ-8ರಲ್ಲಿರುವ ಭಾಗ್ಯಮ್ಮ ಹಾಗೂ ನ್ಯಾಯಾಲಯದ ಮುಂದೆ ನಿಂತಿರುವ ಭಾಗ್ಯಮ್ಮ ಒಬ್ಬರೇ ಎಂದರೆ ಸಾಕ್ಷಿಯು ನಿಡಿ-8ರಲ್ಲಿರುವ ಹಳೆಯ

ಫೋಟೋವನ್ನು ನಾನು ನೋಡಿಲ್ಲ ಎಂದು ನುಡಿಯುತ್ತಾರೆ.

ಮರು ವಿಚಾರಣೆ : ಇಲ್ಲ.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.